**ಕರ್ನಾಟಕ ಸರ್ಕಾರ**
**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಗಾಂಧಿನಗರ, ಬೆಂಗಳೂರು – 560 009.**

ಸಂಖ್ಯೆ:ಕಪಂರಾಆ/ಅಭಿವೃದ್ಧಿ/ಗ್ರಂಥಾಲಯ/558/2024 ದಿನಾಂಕ: 01.08.2024
Comp. No.: 1474144

**<u>ಸುತ್ತೋಲೆ</u>**

**ವಿಷಯ:-** ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ **"ಓದುವ ಬೆಳಕು"** ಕಾರ್ಯಕ್ರಮದ ಅಂಗವಾಗಿ **ಆಗಸ್ಟ್ ಮಾಹೆ ಪೂರ್ಣ 'ಭಾರತ ಸ್ವಾತಂತ್ರ್ಯ ದಿನಾಚರಣೆ'** ಸಂಭ್ರಮೋತ್ಸವವನ್ನು ಆಯೋಜಿಸುವ ಕುರಿತು.

***

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ, ಮಕ್ಕಳು ಓದುವುದರಲ್ಲಿ ಮತ್ತು ಕಲಿಕೆಯಲ್ಲಿ ತೊಡಗಿಸಿಕೊಳ್ಳಲು **"ಓದುವ ಬೆಳಕು"** ಕಾರ್ಯಕ್ರಮವನ್ನು ಅನುಷ್ಠಾನಿಸಲು ಈಗಾಗಲೇ ತಿಳಿಸಲಾಗಿದೆ. ಸದರಿ ಕಾರ್ಯಕ್ರಮದ ಮೂಲಕ ಶಾಲಾ ಮಕ್ಕಳನ್ನು, ವಿಶೇಷವಾಗಿ ಗ್ರಾಮೀಣ ಮಕ್ಕಳನ್ನು ವ್ಯವಸ್ಥಿತವಾಗಿ ಕಲಿಕಾ ಕ್ಷೇತ್ರಕ್ಕೆ ಮರಳಿ ತರುವ ಹಾಗೂ ನಿರಂತರತೆಯನ್ನು ಕಾಪಾಡುವ ಗುರಿಯನ್ನು ಹೊಂದಲಾಗಿದೆ. ಅರಿವು ಕೇಂದ್ರಗಳನ್ನು ಗ್ರಾಮೀಣ ಜ್ಞಾನ ಕೇಂದ್ರಗಳನ್ನಾಗಿಸಲು ಗ್ರಂಥಾಲಯಗಳ ನವೀಕರಣ, ಡಿಜಿಟಲೀಕರಣ ಸೇರಿದಂತೆ ವಿವಿಧ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ಮುಂದುವರೆದು, "ಓದುವ ಬೆಳಕು" ಕಾರ್ಯಕ್ರಮದಡಿಯಲ್ಲಿ ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ ಹಲವಾರು ಅಭಿಯಾನಗಳ ಮೂಲಕ ಪ್ರತಿ ತಿಂಗಳು ಉಪಯುಕ್ತ ಚಟುವಟಿಕೆಯನ್ನು ಆಯೋಜಿಸಲಾಗುತ್ತಿದೆ. ಹೀಗೆ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ. ಅದರಂತೆ, ಅರಿವು ಕೇಂದ್ರಗಳಿಗೆ ಭೇಟಿ ನೀಡುವ ಮಕ್ಕಳಿಗೆ **ಆಗಸ್ಟ್ ಮಾಹೆ ಪೂರ್ಣ 'ಭಾರತ ಸ್ವಾತಂತ್ರ್ಯ ದಿನಾಚರಣೆ'** ಸಂಭ್ರಮೋತ್ಸವವನ್ನುಆಯೋಜಿಸಲು ನಿರ್ಧರಿಸಲಾಗಿದೆ.

**<u>ಅಭಿಯಾನದ ಚಟುವಟಿಕೆಗಳು:</u>**

**ಆಗಸ್ಟ್ ಮಾಹೆ ಅಭಿಯಾನ**

ಆಗಸ್ಟ್ ಮಾಹೆ ಪೂರ್ಣ 'ಭಾರತ ಸ್ವಾತಂತ್ರ್ಯ ದಿನಾಚರಣೆ' ಸಂಭ್ರಮೋತ್ಸವವನ್ನು ಗ್ರಾಮ ಪಂಚಾಯತಿ ಅರಿವು ಕೇಂದ್ರಗಳಲ್ಲಿ ಆಚರಿಸುವುದು. ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಪ್ರತಿ ದಿನ ಒಂದೊಂದು ಘಟನೆ ಅಥವಾ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ **'ಗಟ್ಟಿ ಓದು'** ಮಾಡಿಸುವುದು. ಇಲ್ಲಿ 'ಮಕ್ಕಳಿಗಾಗಿ ಗಾಂಧಿ', ಸ್ವರಾಜ್ಯದ ಕಥೆ' ಇನ್ನಿತರ ಸ್ವಾತಂತ್ರ್ಯದ ಪುಸ್ತಕಗಳನ್ನು ಬಳಸುವುದು ಹಾಗೂ ಪ್ರಸಿದ್ಧ ನಾಯಕರ ಜೀವನ ಚರಿತ್ರೆ ಓದುವುದು, ಗುಂಪು ಚರ್ಚೆ, ಭಾಷಣ ಕಾರ್ಯಕ್ರಮ ಕೈಗೊಳ್ಳುವುದು, ಪ್ರಬಂಧ ಸ್ಪರ್ಧೆ ಏರ್ಪಡಿಸುವುದು.

**ಸ್ವಾತಂತ್ರ್ಯ ದಿನಾಚರಣೆ ಚಟುವಟಿಕೆಗಳು**

- **ತ್ರಿವರ್ಣ ಧ್ವಜ ಮತ್ತು ಬ್ಯಾಡ್ಜ್ ತಯಾರಿಸುವುದು-** ಗ್ರಂಥಾಲಯ ಮೇಲ್ವಿಚಾರಕರು ಆಗಸ್ಟ್ ತಿಂಗಳಿನಲ್ಲಿ ಗ್ರಂಥಾಲಯಕ್ಕೆ ಬರುವ ಎಲ್ಲಾ ಮಕ್ಕಳನ್ನು ಖಾತರಿಪಡಿಸಿಕೊಂಡು, ಅಂತಹ ಮಕ್ಕಳಿಗೆ ತ್ರಿವರ್ಣ ಧ್ವಜ ಮತ್ತು ಬ್ಯಾಡ್ಜ್ ತಯಾರಿಸಲು ತಿಳಿಸುವುದು.

- ಗ್ರಂಥಾಲಯದಲ್ಲಿ ಮಕ್ಕಳು ಬಣ್ಣಗಳು ಮತ್ತು ಕಾಗದದೊಂದಿಗೆ ಸಮಯ ಕಳೆಯಬೇಕು ಮತ್ತು ತ್ರಿವರ್ಣ ಧ್ವಜ ಹಾಗೂ ಬ್ಯಾಡ್ಜ್‌ನ್ನು ಬಟ್ಟೆ ಪಿನ್‌ನೊಂದಿಗೆ ತಯಾರಿಸಬೇಕು. ಈ ಬ್ಯಾಡ್ಜ್‌ನ್ನು ಅವರು ಆಗಸ್ಟ 15 ರಂದು ತಮ್ಮ ಶಾಲೆಯ ಧ್ವಜಾರೋಹಣ ಸಮಾರಂಭ ಹಾಗೂ ಆಚರಣೆಗಳಲ್ಲಿ ಧರಿಸಲು ತಿಳಿಸುವುದು.



- **ಸಂವಿಧಾನದ ಓದು-** ಸ್ವಾತಂತ್ರ್ಯ ದಿನಾಚರಣೆಯ ದಿನದಂದು ಸಂವಿಧಾನದ ಮೂಲ ಆಶಯಗಳ ಬಗ್ಗೆ ಮಕ್ಕಳಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಅರಿವು ಮೂಡಿಸಲು ಭಾರತ ಸಂವಿಧಾನದ ಪೀಠಿಕೆ(Preamble)ಯನ್ನು ಸಾಮೂಹಿಕವಾಗಿ ಓದುವಂತೆ ಕ್ರಮವಹಿಸುವುದು.
- **ದೇಶಭಕ್ತಿ ಗೀತ ಗಾಯನ-** ಗ್ರಂಥಾಲಯ ಮೇಲ್ವಿಚಾರಕರು ಸ್ವಾತಂತ್ರ್ಯ ದಿನದ ಹಾಡುಗಳು ಹಾಗೂ ದೇಶಭಕ್ತಿ ಗೀತೆಗಳನ್ನು ಅಭ್ಯಾಸ ಮಾಡಲು ಮಕ್ಕಳನ್ನು ಒಟ್ಟುಗೂಡಿಸಬೇಕು. ಇದರಿಂದಾಗಿ ಗುಂಪು ಚಟುವಟಿಕೆಯ ಮೂಲಕ ಮತ್ತು ವೈಯಕ್ತಿಕವಾಗಿ ಮಕ್ಕಳು ಕನ್ನಡದಲ್ಲಿ ಹಾಡುಗಳನ್ನು ಕಲಿಯುತ್ತಾರೆ. ಮಕ್ಕಳು ಕಲಿತ ಹಾಡನ್ನು ಸ್ವಾತಂತ್ರ್ಯ ದಿನದಂದು ಅವರ ಶಾಲೆಗಳಲ್ಲಿ ಅಥವಾ ಗ್ರಂಥಾಲಯದಲ್ಲಿ ಹಾಡಬಹುದು.



- **ಸ್ವಾತಂತ್ರ ಹೋರಾಟಗಾರರ ಪರಿಚಯ-** ಗ್ರಂಥಾಲಯ ಮೇಲ್ವಿಚಾರಕರು ಸ್ವತಂತ್ರ ಭಾರತ ಚಳುವಳಿಗೆ ಕೊಡುಗೆ ನೀಡಿದ ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಥಳೀಯ ಹಿರಿಯರು, ಶಾಲಾ ಶಿಕ್ಷಕರು ಇವರುಗಳ ಮೂಲಕ ಪರಿಚಯಿಸಬೇಕು. ಅವರ ವ್ಯಕ್ತಿತ್ವವನ್ನು ವಿವರಿಸಿ, ಉತ್ತಮ ನಾಗರಿಕರಾಗಿ ದೇಶಕ್ಕೆ ಹೇಗೆ ಕೊಡುಗೆ ನೀಡಬಹುದು ಎಂಬುದನ್ನು ಮಕ್ಕಳು ಅರಿಯುವಂತೆ ಪ್ರೇರೇಪಿಸಬೇಕು. ಮಕ್ಕಳಿಂದ ಸ್ವಾತಂತ್ರ್ಯ ಹೋರಾಟಗಾರರ ಕುರಿತು ಪುಸ್ತಕಗಳ 'ಗಟ್ಟಿ ಓದು' ಮಾಡಿಸುವುದು; ಗುಂಪು ಚರ್ಚೆ ಕೈಗೊಳ್ಳುವುದು

- ಆಗಸ್ಟ ತಿಂಗಳಲ್ಲಿ ಪೂರ್ಣವಾಗಿ ಸ್ವಾತಂತ್ರೋತ್ಸವ ಸಂಭ್ರಮವನ್ನು ಆಚರಿಸುವುದು. ಗ್ರಂಥಾಲಯ ಮೇಲ್ವಿಚಾರಕರು ದೇಶಭಕ್ತಿ, ಸಾಮಾಜಿಕ ಕಾಳಜಿಯುಳ್ಳ ದೇಶಭಕ್ತರ ಚಲನಚಿತ್ರಗಳನ್ನು ಪ್ರದರ್ಶಿಸಲು ಕ್ರಮ ವಹಿಸುವುದು. ಮಕ್ಕಳು ದೇಶ ಭಕ್ತರ ಚಲನಚಿತ್ರಗಳನ್ನು ವೀಕ್ಷಿಸಿ, ತಾವು ಗಮನಿಸಿದ ಅಂಶಗಳ ಭಾಷಣ ಮಾಡುವುದು.

- **ನಾನು ಮತ್ತು ನನ್ನ ದೇಶ-** ಗ್ರಂಥಾಲಯದಲ್ಲಿ ಮಕ್ಕಳು ಸ್ವಾತಂತ್ರ ಹೋರಾಟ ಮತ್ತು ಸ್ವತಂತ್ರ ಭಾರತವನ್ನು ಹೇಗೆ ಅರ್ಥ ಮಾಡಿಕೊಂಡಿದ್ದಾರೆಂದು ಚರ್ಚೆಗಳನ್ನು ನಡೆಸಬಹುದು. ಚರ್ಚೆಯು ಮಕ್ಕಳ ಕೇಂದ್ರೀಕೃತವಾಗಿ, ಮಕ್ಕಳಲ್ಲಿ ದೇಶಭಕ್ತಿ ಮತ್ತು ಆರೋಗ್ಯಕರ ಸಮಾಜ ನಿರ್ಮಾಣ ಅಂಶಗಳ ವೃದ್ಧಿಗೆ ಪೂರಕವಾಗುವುದು. ಅಲ್ಲದೇ, **'ನಾನು ಮತ್ತು ನನ್ನ ದೇಶ'**ದ ಬಗ್ಗೆ ಮಕ್ಕಳಿಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸುವುದು.

ಈ ಮೇಲ್ಕಂಡಂತೆ 2024ರ ಭಾರತ ಸ್ವಾತಂತ್ರ್ಯ ದಿನಾಚರಣೆಯನ್ನು ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ ಪೂರ್ಣವಾಗಿ ಆಚರಿಸಲು ಕ್ರಮವಹಿಸುವುದು.

**(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್)**
**ಗ್ರಾಅ ಮತ್ತು ಪಂ.ರಾಜ್ ರವರಿಂದ ಟಿಪ್ಪಣಿ ಅನುಮೋದಿಸಲ್ಪಟ್ಟಿದೆ).**

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**<u>ಇವರಿಗೆ:</u>**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3. ರಾಜ್ಯದ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
4. ಗ್ರಾಮ ಪಂಚಾಯತಿಯ ಅರಿವು ಕೇಂದ್ರಗಳ ಮೇಲ್ವಿಚಾರಕರುಗಳಿಗೆ(ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮುಖಾಂತರ)
5. ಮಾಹಿತಿ ಕೇಂದ್ರ/ವೆಬ್ ಸೈಟ್, ಗ್ರಾಅಪ ಇಲಾಖೆ.
6. ಮಾಹಿತಿ ಕೇಂದ್ರ/ವೆಬ್‌ಸೈಟ್, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.

**<u>ಪ್ರತಿಯನ್ನು:</u>**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್),ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಯವರಿಗೆ
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಯವರಿಗೆ.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
4. ಕಛೇರಿ ಪ್ರತಿ.